
## ಮರಕ್ಕೆ ಕೂದಲು ಬಂತು

ನಮ್ಮ ನೆಯವರ ಐವತ್ತನೇ ಜನ್ಮ ದಿನದ ನೆನಪಿಗೆ ನಮ್ಮ ಮನೆಮುಂದೆ ಅಶೋಕ ವೃಕ್ಷಗಳನ್ನು ನೆಟ್ಟು, ಪಾಲನೆ ಪೋಷಣೆ ಮಾಡ್ತಾ ಬಂದಿದ್ದೆವು. ಅವು ಬೆಳೆದು ದೊಡ್ಡದಾದಂತೆ ವಿದ್ಯುತ್ ಕಂಬದ ವೈರ್, ಪಕ್ಕದ ಮನೆ ಚಾವಣಿಗೆ ಹಾಗೂ ಜನರ ಓಡಾಟಕ್ಕೆ ತೊಂದರೆ ಆಗುತ್ತಿತ್ತು. ಹಾಗಾಗಿ, ಆ ಮರದ ರೆಂಬೆಕೊಂಬೆ ಕತ್ತರಿಸಿದ್ದೆವು.

ದೀಪಾವಳಿಗೆ ಮನೆಗೆ ಬಂದಿದ್ದ ಮೊಮ್ಮಗಳು ವರ್ಣಿಕಾ, ಬೋಳಾದ ಮರವನ್ನು ನೋಡಿ, 'ನಾನು ಚಿಕ್ಕವಳಿದ್ದಾಗ ನನ್ನ ತಲೆ ಬೋಡಾ ಮಾಡಿದಂತೆ ಈ ಮರಕ್ಕೂ ಬೋಡಾ ಮಾಡಿದ್ದೀರಾ' ಎಂದಳು. ಅದಾಗಿ ಕೆಲವು ತಿಂಗಳ ನಂತರ ಕ್ರಿಸ್‌ಮಸ್ ಹಬ್ಬದ ರಜೆಗೆ ಬಂದಿದ್ದ ಮೊಮ್ಮಗಳು ಬೆಳೆದು ನಿಂತಿದ್ದ ಅಶೋಕ ಮರವನ್ನು ಗಮನಿಸಿ 'ಅರೆ, ಮರಕ್ಕೆ ಕೂದಲು ಬಂದಿವೆ' ಎಂದು ಹೇಳಿದಾಗ ಮನೆಯವರೆಲ್ಲಾ ನಕ್ಕಿದ್ದೇ ನಕ್ಕಿದ್ದು.

**ಅನುರಾಧ ಟಿ.**





ಕಲೆ: ಗಣೇಶ ಆಚಾರ್ಯ

## ಕರಗಲಾರದ ಆಸ್ತಿ...

ಗುಂಡ ತನ್ನ ಗೆಳೆಯರ ಬಳಗದ ಜೊತೆಗೆ ಒಂದು ರೆಸಾರ್ಟ್‌ನಲ್ಲಿ ಬಹಳ ವರ್ಷಗಳ ನಂತರ ಭೇಟಿಯಾಗಿದ್ದನು. ಅವನ ಎಲ್ಲಾ ಗೆಳೆಯರು ಒಳ್ಳೆಯ ಉದ್ಯೋಗದಲ್ಲಿದ್ದು ನಿವೃತ್ತಿಯಾಗಿದ್ದರಿಂದ ಎಲ್ಲರೂ ತಮ್ಮ ಬಳಿ ಇರುವ ಆಸ್ತಿಯಾದ ಬಂಗಲೆ, ಮನೆ, ಫ್ಲ್ಯಾಟ್‌ಗಳ ಬಗ್ಗೆ ಹೇಳಿಕೊಳ್ಳುತ್ತಿದ್ದರು.

ಆಗ ಗುಂಡ 'ಅದೇನ್ ಮಹಾ ಅಂತ ಕೊಚ್ಚಿಕೊಳ್ಳುತ್ತಿದ್ದೀರಾ, ನಮ್ಮ ಮನೆಯವರ ಒಬ್ಬೊಬ್ಬರ ಬಳಿಯೂ ಒಂದೊಂದು 'ಸಿಟಿ' ಇದೆ' ಎಂದನು. ಎಲ್ಲರೂ ಒಕ್ಕೊರಲಿನಿಂದ ಹಾಗಂದ್ರೆ ಏನೋ ಎಂದು ಕೇಳಿದಾಗ, 'ಅಂದರೆ ಒಬ್ಬೊಬ್ಬರಿಗೂ 'ಅಸಿಡಿಟಿ', 'ಒಬೇಸಿಟಿ' ಇದೆ' ಎಂದಾಗ, ಗೆಳೆಯರೆಲ್ಲ ಸುಸ್ತೋ ಸುಸ್ತು!

**ವಿ. ವಿಜಯೇಂದ್ರ ರಾವ್**